ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಅಟಲ್ ಬಿಹಾರಿ ವಾಜಪೇಯಿ ಸಂಕೀರ್ಣ,
ಕೇಂದ್ರಕಛೇರಿ, ಕೆ.ಹೆಚ್.ರಸ್ತೆ, ಶಾಂತಿನಗರ
ಬೆಂಗಳೂರು-560027 : ಭಾರತ
ದೂರವಾಣಿ:080-22537402
ವೆಬ್ ಸೈಟ್ :www.mybmtc.in

ಆಡಳಿತ ಇಲಾಖೆ

Bangalore Metropolitan Transport Corporatio
Atal Bihari Vajpeyi Comple
Central Offices, K.H. Road, Shanthinaga
Bangalore-560027 : Ind
Tel: 080-2253740
Website : www.mybmtc.i

ಸಂಖ್ಯೆ:ಬೆಂಮನಸಾಸಂ:ಕೇಕ:ಸಿಬ್ಬಂದಿ: 917:2024-25 ದಿನಾಂಕ: 30 -05-2024

## :ಮಾರ್ಪಾಡು ಆದೇಶ:

ವಿಷಯ: ರಜೆ ನಿರ್ವಹಣಾ ವ್ಯವಸ್ಥೆ(ಎಲ್.ಎಂ.ಎಸ್)ಯಲ್ಲಿನ ಬದಲಾವಣೆ ಕುರಿತು.

ಉಲ್ಲೇಖ: 1) ಸುತ್ತೋಲೆ ಸಂಖ್ಯೆ:146/2020 ದಿ:20-05-2020.
2) ಕಛೇರಿ ಆದೇಶ ಸಂ:ಬೆಂಮಸಾಸಂಸ್ಥೆ:ಕೇಕ:ಮುಸಿವ್ಯ:44/2022-23 ದಿನಾಂಕ:14-09-2022.
3) ದಿ:01-02-2024 ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ ಸಂ:ಬೆಂಮಸಾಸಂಸ್ಥೆ:ಕೇಕ:ಸಂ:ಆ:2422:23 24 ದಿನಾಂಕ:05-02-2024.

*******

ಬೆಂಮಸಾಸಂಸ್ಥೆಯಲ್ಲಿ ನೌಕರರಿಗೆ ಪಾರದರ್ಶಕ ರಜೆ ನಿರ್ವಹಣೆಯ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶದಿಂದ ರಜೆ ನಿರ್ವಹಣಾ ವ್ಯವಸ್ಥೆ(ಎಲ್.ಎಂ.ಎಸ್) ತಂತ್ರಾಂಶವನ್ನು ಅನುಷ್ಠಾನಗೊಳಸಲಾಗಿರುತ್ತದೆ. ರಜೆ ನಿರ್ವಹಣಾ ವ್ಯವಸ್ಥೆಯನ್ನು ಉತ್ತಮ ಪಡಿಸಿ ಎಲ್ಲಾ ಚಾಲನಾ ಸಿಬ್ಬಂದಿಗಳಗೆ ಸ್ವಯಂಚಾಲಿತವಾಗಿ ಗರಿಷ್ಟ ಪ್ರಮಾಣದಲ್ಲಿ ರಜೆ ನೀಡುವ ಉದ್ದೇಶದಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಸುತ್ತೋಲೆ ಹಾಗೂ ಮುಂದುವರೆದ ನಿರ್ದೇಶನಗಳಲ್ಲಿ ಕೆಲವೊಂದು ಬದಲಾವಣೆ ಮಾಡಿ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿದೆ.

| ಕ್ರ.ಸಂ | ಪ್ರಸ್ತುತ ಇರುವ ನಿಯಮ | ಬದಲಾಯಿಸಿರುವ ನಿಯಮ |
|---|---|---|
| 1. | ಚಾಲನಾ ಸಿಬ್ಬಂದಿಗಳು ರಜೆ ನಿರ್ವಹಣಾ ವ್ಯವಸ್ಥೆಯಲ್ಲಿ ಮುಂಗಡವಾಗಿ ರಜೆ ಅರ್ಜಿ ಸಲ್ಲಿಸಿದಲ್ಲಿ ಘಟಕ ವ್ಯವಸ್ಥಾಪಕರು ರಜೆ ಅರ್ಜಿ ವಿಲೇವಾರಿ ಮಾಡಲು ಯಾವುದೇ ಕಾಲಮಿತಿ ಇರುವುದಿಲ್ಲ. | **ಅ)** ಚಾಲನಾ ಸಿಬ್ಬಂದಿಗಳು ರಜೆ ನಿರ್ವಹಣಾ ವ್ಯವಸ್ಥೆಯಲ್ಲಿ ಮುಂಡವಾಗಿ ರಜೆ ಅರ್ಜಿ ಸಲ್ಲಿಸಿದಲ್ಲಿ, ಘಟಕ ವ್ಯವಸ್ಥಾಪಕರು ರಜೆ ಕೋರಿದ ದಿನಾಂಕದ ನಿರ್ದಿಷ್ಠ ಕಾಲಮಿತಿಯೊಳಗೆ ರಜೆ ಅರ್ಜಿಯನ್ನು ವಿಲೇವಾರಿ ಮಾಡುವುದು. ಘಟಕ ವ್ಯವಸ್ಥಾಪಕರು ರಜೆ ಅರ್ಜಿಯನ್ನು ವಿಲೇವಾರಿ ಮಾಡದೇ ಇದ್ದ ಪಕ್ಷದಲ್ಲಿ ತಂತ್ರಾಂಶದಲ್ಲಿ ಸ್ವಯಂ ಚಾಲಿತವಾಗಿ ಶೇ.2ಕ್ಕೆ ಮಿತಿಗೊಳಿಸಿ (Auto sanction upto 2%) ಮಂಜೂರು ಆಗುವಂತೆ ಕ್ರಮವಹಿಸಲಾಗುತ್ತದೆ.<br>ಉದಾ: ಚಾಲನಾ ಸಿಬ್ಬಂದಿಗಳು ಮುಂಗಡವಾಗಿ ದಿನಾಂಕ:10-05-2024ಕ್ಕೆ ರಜೆ ಸಲ್ಲಿಸಿದಲ್ಲಿ, ಘಟಕ ವ್ಯವಸ್ಥಾಪಕರು ದಿ:09-05-2024ರ ರಾತ್ರಿ 10.00 ಗಂಟೆಯೊಳಗೆ ರಜೆ ಅರ್ಜಿಯನ್ನು ವಿಲೇವಾರಿ ಮಾಡುವುದು/ ರಜೆ ವಿಲೇವಾರಿ ಮಾಡದೇ ಇದ್ದಲ್ಲಿ ರಜೆ ಅರ್ಜಿಗಳನ್ನು ಸ್ವಯಂ |

| ಕ್ರ.ಸಂ | ಪ್ರಸ್ತುತ ಇರುವ ನಿಯಮ | ಬದಲಾಯಿಸಿರುವ ನಿಯಮ |
| --- | --- | --- |
| | | ಚಾಲಿತವಾಗಿ ಶೇ.2ಕ್ಕೆ ಮಿತಿಗೊಳಿಸಿ (Auto sanction upto 2%) ರಜೆ ಮಂಜೂರು ಆಗುವಂತೆ ಕ್ರಮ ವಹಿಸುವುದು. |
| | | **ಆ)** ರಜೆ ನಿರ್ವಹಣಾ ವ್ಯವಸ್ಥೆಯಲ್ಲಿ ತುರ್ತು ಸಂದರ್ಭಗಳಲ್ಲಿ ಅದೇ ದಿನದಂದೇ ರಜೆ ಅರ್ಜಿ ಸಲ್ಲಿಸಿದಲ್ಲಿ, ಘಟಕ ವ್ಯವಸ್ಥಾಪಕರು ರಜೆ ಕೋರಿದ ಒಂದು ದಿನದ ಕಾಲಮಿತಿಯೊಳಗೆ ರಜೆ ಅರ್ಜಿಯನ್ನು ವಿಲೇವಾರಿ ಮಾಡುವುದು. ರಜೆ ಅರ್ಜಿ ವಿಲೇವಾರಿ ಮಾಡದೇ ಇದ್ದ ಪಕ್ಷದಲ್ಲಿ ತಂತ್ರಾಂಶದಲ್ಲಿ ಸ್ವಯಂ ಚಾಲಿತವಾಗಿ ರಜೆ ಮಂಜೂರು ಆಗುವಂತೆ ಕ್ರಮ ವಹಿಸುವುದು.<br>ಉದಾ: ಚಾಲನಾ ಸಿಬ್ಬಂದಿಗಳು ಮುಂಗಡವಾಗಿ ದಿನಾಂಕ:10-05-2024ಕ್ಕೆ ರಜೆ ಅರ್ಜಿ ಸಲ್ಲಿಸಿದಲ್ಲಿ, ಘಟಕ ವ್ಯವಸ್ಥಾಪಕರು ದಿನಾಂಕ:10-05-2024 ರ ರಾತ್ರಿ 10.00 ಗಂಟೆಯೊಳಗೆ ರಜೆ ಮಂಜೂರು ಮಾಡುವುದು/ ರಜೆ ಅರ್ಜಿ ವಿಲೇವಾರಿಯಾಗದೇ ಇದ್ದ ಪಕ್ಷದಲ್ಲಿ ಸ್ವಯಂ ಚಾಲಿತವಾಗಿ ಶೇ.2% ಮಿತಿಗೊಳಿಸಿ (Auto sanction upto 2%) ರಜೆ ಮಂಜೂರು ಆಗುವಂತೆ ಕ್ರಮ ವಹಿಸುವುದು. |
| 2. | ರಜೆ ನಿರ್ವಹಣಾ ವ್ಯವಸ್ಥೆಯಲ್ಲಿ ರಜೆ ತಿರಸ್ಕಾರಗೊಂಡ ದಿನಕ್ಕೆ ಮತ್ತೊಮ್ಮೆ ಅದೇ ದಿನಕ್ಕೆ ರಜೆ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ. | ರಜೆ ನಿರ್ವಹಣಾ ವ್ಯವಸ್ಥೆಯಲ್ಲಿ ರಜೆ ತಿರಸ್ಕಾರಗೊಂಡ ದಿನಕ್ಕೆ ಮತ್ತೊಮ್ಮೆ ರಜೆ ಅರ್ಜಿ ಸಲ್ಲಿಸಲು ಅವಕಾಶವನ್ನು ಹಿಂಪಡೆಯಲಾಗಿದೆ. |
| 3. | **ಘಟಕ ವ್ಯವಸ್ಥಾಪಕರ ಕೋಟಾ** :ಶೇ.3%<br>ಅವಶ್ಯಕತೆ ಹಾಗೂ ತುರ್ತು ಪರಿಸ್ಥಿತಿಯನ್ನು ಪರಿಗಣಿಸಿ, 1 ರಿಂದ 7 ದಿನಗಳವರೆಗೆ ಘಟಕ ವ್ಯವಸ್ಥಾಪಕರು ಮಂಜೂರು ಮಾಡುವುದು ಹಾಗೂ ಘಟಕ ವ್ಯವಸ್ಥಾಪಕರ ಶಿಫಾರಸ್ಸಿನ ಮೇರೆಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳು 8 ದಿನಗಳು/ ಅದಕ್ಕಿಂತ ಹೆಚ್ಚಿನ ರಜೆಗಳನ್ನು ಗರಿಷ್ಠ 30 ದಿನಗಳವರೆಗೆ ಮಂಜೂರು ಮಾಡುವುದು. | **ಘಟಕ ವ್ಯವಸ್ಥಾಪಕರ ಕೋಟಾ:ಶೇ.3%**<br>➢ ಶೇ.2% ರಷ್ಟು ರಜೆ: 1 ರಿಂದ 4ದಿನಗಳವರೆಗೆ 48 ಗಂಟೆಯೊಳಗಾಗಿ (ಇವತ್ತು ಅಥವಾ ನಾಳೆಯಿಂದ), (ಕ್ಯಾಲೆಂಡರ್ ಮಾಹೆಯಲ್ಲಿ ಒಬ್ಬರಿಗೆ ಒಂದು ಸಲ ಮಾತ್ರ)<br>➢ ಶೇ.1% ರಷ್ಟು ರಜೆ: ರಜೆಯನ್ನು ಇವತ್ತಿನಿಂದ 5 ದಿನಗಳು / ಅದಕ್ಕಿಂತ ಹೆಚ್ಚಿನ ರಜೆಗಳನ್ನು ಗರಿಷ್ಠ 30 ದಿನಗಳವರೆಗೆ ಘಟಕ ವ್ಯವಸ್ಥಾಪಕರು ಶಿಫಾರಸ್ಸಿನ ಮೇರೆಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಮಂಜೂರು ಮಾಡುವುದು. |

| ಕ್ರ.ಸಂ | ಪ್ರಸ್ತುತ ಇರುವ ನಿಯಮ | ಬದಲಾಯಿಸಿರುವ ನಿಯಮ |
|---|---|---|
| 4. | – | ಹಿಂದಿನ 30 ದಿನಗಳಲ್ಲಿ ರಜೆಯನ್ನು ರದ್ದು ಮಾಡಬೇಕಿದ್ದಲ್ಲಿ, ಘಟಕ ವ್ಯವಸ್ಥಾಪಕರಿಂದ ರದ್ದುಪಡಿಸುವುದು. ಉದಾ:- ದಿನಾಂಕ: 15-05-2024 ನೇ ದಿನಾಂಕಕ್ಕೆ ರಜೆ ಮಂಜೂರಾಗಿದ್ದು, ಅನಿವಾರ್ಯ ಕಾರಣಕ್ಕಾಗಿ ನೌಕರರು ಮೇಲಾಧಿಕಾರಿಗಳ ಅನುಮತಿ ಪಡೆದು ಆ ದಿನ ಕಾರ್ಯ ನಿರ್ವಹಿಸಿದ್ದಲ್ಲಿ ಅಂತಹ ರಜೆಯನ್ನು ದಿನಾಂಕ:16-05-2024 ರಿಂದ ದಿನಾಂಕ:15-06-2024 (30 ದಿನಗಳೊಳಗಾಗಿ)ರೊಳಗಾಗಿ ಘಟಕ ವ್ಯವಸ್ಥಾಪಕರು ರಜೆ ಮಂಜೂರಾತಿಯನ್ನು ರದ್ದುಪಡಿಸಬಹುದು. |
| 5. | – | ವಿಭಾಗೀಯ ನಿಯಂತ್ರಣಾಧಿಕಾರಿಗಳು ಮ್ಯಾನುಯಲ್ ಆಗಿ ಅನುಮೋದನೆಗೊಂಡಿರುವ ರಜೆಯನ್ನು ಕಡ್ಡಾಯವಾಗಿ ರಜೆ ನಿರ್ವಹಣಾ ತಂತ್ರಾಂಶದಲ್ಲಿ ನಮೂದಿಸಲು ಕ್ರಮ ಕೈಗೊಳ್ಳುವುದು. |

ಮೇಲಿನ ಅಂಶಗಳನ್ನು ಹೊರತುಪಡಿಸಿ, ಉಲ್ಲೇಖ-01&02ರ ನಿರ್ದೇಶನಗಳಲ್ಲಿ ಇನ್ಯಾವುದೇ ಬದಲಾವಣೆ ಇರುವುದಿಲ್ಲ. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಸಂಬಂಧಪಟ್ಟವರೆಲ್ಲರು ಮೇಲಿನ ನಿರ್ದೇಶನದನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.

30/5

**ವ್ಯವಸ್ಥಾಪಕ ನಿರ್ದೇಶಕರು**
**ಬೆಂಮಸಾಸಂಸ್ಥೆ.**

**ಪ್ರತಿಯನ್ನು:**

1) ನಿರ್ದೇಶಕರು(ಭ:ಜಾ)/ನಿರ್ದೇಶಕರು(ಮಾ&ತ) ರವರ ಆಪ್ತ ಸಹಾಯಕರ ಮಾಹಿತಿಗಾಗಿ. ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರುವುದು.
2) ಎಲ್ಲಾ ಇಲಾಖಾ ಮುಖ್ಯಸ್ಥರು, ಬೆಮಸಾಸಂಸ್ಥೆ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
3) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು/ಪ್ರಾಂಶುಪಾಲರು ವಡ್ಡರಹಳ್ಳಿ ತರಬೇತಿ ಕೇಂದ್ರ ಬೆಮಸಾಸಂಸ್ಥೆ ರವರುಗಳ ಮಾಹಿತಿಗಾಗಿ.
4) ಆಡಳಿತಾಧಿಕಾರಿ (ಶಿಸ್ತು), ಸಹಾಯಕ ಆಡಳಿತಾಧಿಕಾರಿ (ಆಡಳಿತ), ಸಹಾಯಕ ಆಡಳಿತಾಧಿಕಾರಿ (ಸಿಬ್ಬಂದಿ & ವರಿಷ್ಠತೆ) ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ಬೆಂಮಸಾಸಂಸ್ಥೆಯ ಎಲ್ಲಾ ಹಿರಿಯ / ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ. ಹಾಗೂ ಸೂಕ್ತ ಕ್ರಮಕ್ಕಾಗಿ.